ಶ್ರೀ ಎಂ.ಪಿ. ಜಯರುದ್ರಯ್ಯ ಇವರ ಸೇವೆಯನ್ನು ಅವರ ಮಾತೃ ಕಾರ್ಖಾನೆಗೆ ಹಿಂದಿರುಗಿಸಲು ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರಿಗೆ ಸೂಚನೆ ನೀಡಲಾಗಿದ್ದು, ರೇಷ್ಮೆ ಆಯುಕ್ತರು ದಿನಾಂಕ 26-3-03 ರಂದು ಈ ನೌಕರರ ಸೇವೆಯನ್ನು ರೇಷ್ಮೆ ಕಾರ್ಖಾನೆಗೆ ಹಿಂದಿರುಗಿಸಿದ್ದಾರೆ. ಸದರಿ ನೌಕರರ ವಿರುದ್ಧ ಮಾಡಲಾದ ಅವ್ಯವಹಾರದ ದೂರಿನ ಬಗ್ಗೆ ವಿಚಾರಣೆ ನಡೆಸಲು ಯಾವುದೇ ಸಾಕ್ಷಾಧಾರಗಳ ಪೂರಕ ದಾಖಲಾತಿಗಳಿಲ್ಲದೆ ಇರುವುದರಿಂದ ಇಲಾಖಾ ವಿಚಾರಣೆ ನಡೆಸಿರುವುದಿಲ್ಲ.

ಉ) ಆರೋಪಗಳನ್ನು ದೃಢಪಡಿಸಬಲ್ಲ ದಾಖಲಾತಿಗಳು ಲಭ್ಯವಾದಲ್ಲಿ ಇವರ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು.

ತುರುವೇಕೆರೆ ತಾಲ್ಲೂಕು ವಡವನಗಟ್ಟ ಬ್ಯಾಲಹಳ್ಳಿ ಗೇಟ್‌ನಲ್ಲಿ ಪಶು ಆಸ್ಪತ್ರೆ ಪ್ರಾರಂಭ

271(2622) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೇಕೆರೆ): ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತುರುವೇಕೆರೆ ತಾಲ್ಲೂಕು ಮಾಯಸಂದ್ರ ಹೋಬಳಿ ವಡವನಗಟ್ಟ ಅಥವಾ ಬ್ಯಾಲಹಳ್ಳಿಗೇಟ್‌ನಲ್ಲಿ ಪಶುಆಸ್ಪತ್ರೆ ಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಇದುವರೆಗೆ ತೆರೆಯದಿರಲು ಕಾರಣವೇನು?

ಇ) ಸುತ್ತಮುತ್ತ ಸುಮಾರು 7-8 ಕಿ.ಮೀ ಗಳ ಜನ ಜಾನುವಾರುಗಳ ಚಿಕಿತ್ಸೆಗೆ ತುಂಬಾ ತೊಂದರೆಯಲ್ಲಿವೆ;

ಈ) ಈ ವರ್ಷ ತಕ್ಷಣ ಪ್ರಾರಂಭಿಸಲಾಗುವುದೇ?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು):

ಅ) ಮತ್ತು ಆ)

ಹೊಸ ಪಶುವೈದ್ಯಕೀಯ ಸಂಸ್ಥೆ ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲ.

ಇ) ಹಾಲಿ ಪಶು ಆಸ್ಪತ್ರೆ, ಮಾಯಸಂದ್ರ ಇಲ್ಲಿಂದ ಜಾನುವಾರುಗಳಿಗೆ ಚಿಕಿತ್ಸಾ ಸೌಲಭ್ಯ ಒದಗಿಸಲಾಗುತ್ತಿದೆ.

ಈ) ಅನ್ವಯಿಸುವುದಿಲ್ಲ.

ಸರ್ಕಾರಿ ರೇಷ್ಮೆ ಕಾರ್ಖಾನೆಗಳ ರೇಷ್ಮೆ ಮಾರಾಟ

272(2312) ಶ್ರೀ ಶಿವಳ್ಳಿ ಚನ್ನಬಸಪ್ಪ ಸತ್ಯಪ್ಪ (ಕುಂದಗೋಳ) : ಮಾನ್ಯ ರೇಷ್ಮೆ ಹಾಗೂ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಫ್ಷಿಟ್ಟು ಉತ್ತರಿಸುವರೇ?

ಅ) ಸರ್ಕಾರಿ ರೇಷ್ಮೆ ಕಾರ್ಖಾನೆಗಳಲ್ಲಿ ಉತ್ಪಾದಿಸಲಾದ ಕಚ್ಚಾ ರೇಷ್ಮೆ ಎಷ್ಟು ಪ್ರಮಾಣಗಳಲ್ಲಿ ಮಾರಾಟವಾಗದೇ ಉಳಿದಿದೆ?

ಆ) ಮಾರಾಟವಾಗದೇ ಉಳಿಯಲು ಕಾರಣವೇನು?

ಇ) ಸದರಿ ರೇಷ್ಮೆ ಮಾರಾಟಕ್ಕೆ ಕ್ರಮ ಕೈಗೊಳ್ಳಲಾಗುವುದೇ?

ಈ) ಮಾರಾಟದಿಂದ ಆಗುವ ನಷ್ಟವೆಷ್ಟು?